# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್-ಸಂಖ್ಯೆ 48ರಲ್ಲಿ ದಿನಾಂಕ: 03.12.2022ರಂದು ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ:03.12.2022ರಂದು ವಾರ್ಡ್ ಸಂಖ್ಯೆ 48ರ ಸೆಪ್ಟೆಂಬರ್ ಮಾಹೆಯ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ 48ರ ಎನ್.ಜಿ.ಎಫ್ ಬಡಾವಣೆ ನಾಗರಭಾವಿಯ ಗಣೇಶ ದೇವಸ್ಥಾನ ಹಿಂಭಾಗದಲ್ಲಿರುವ ಅಸೋಸಿಯೇಷನ್ ಕಛೇರಿ ಕಟ್ಟಡದಲ್ಲಿ ಹಾಜರಿದ್ದ ಎಲ್ಲಾ ಸ್ಥಳೀಯ ನಿವಾಸಿಗಳೊಂದಿಗೆ ನಡೆಸಲಾಯಿತು ಹಾಗೂ ಈ ಕೆಳಕಂಡಂತೆ ಸದಸ್ಯರು/ಸಾರ್ವಜನಿಕರು ಭಾಗವಹಿಸಿರುತ್ತಾರೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀ. ಮೋಹನ್.ಸಿ.ಹೊಂಡದಕೇರಿ ಕಾ.ಪಾ.ಅ(ಯೋಜನೆ), ರಾ.ರಾ.ನ.ವ ಹಾಗೂ ವಾರ್ಡ್48ರ ನೋಡಲ್ ಅಧಿಕಾರಿಗಳು.
2. ಶ್ರೀ. ವೆಂಕಟೇಶ್ ಕಿರಿಯ ಅಭಿಯಂತರರು ಬಿ.ಬಿ.ಎಂ.ಪಿ ಹಾಗೂ ವಾರ್ಡ್48 ಸಮಿತಿ ಕಾರ್ಯದರ್ಶಿಗಳು.
3. ಶ್ರೀ. ಶರತ್ ಕಿರಿಯ ಆರೋಗ್ಯ ಪರಿವೀಕ್ಷಕರು.

**ಸಭೆಯಲ್ಲಿ ಹಾಜರಿದ್ದ ಸ್ಥಳೀಯ ನಿವಾಸಿಗಳು:**

1. ಶ್ರೀ. ಎಸ್.ಕೆ.ಭಟ್ 14ನೇ ಬ್ಲಾಕ್, ಎನ್.ಜಿ.ಇ.ಎಫ್ ಬಡಾವಣೆ, ನಾಗರಭಾವಿ ನಿವಾಸಿಗಳು,
2. ಶ್ರೀ. ಪ್ರವೀಣ್.ಕೆ ಸ್ಥಳೀಯ ನಿವಾಸಿಗಳು,
3. ಶ್ರೀ. ಗುರುಪ್ರಸಾದ್ 14ನೇ ಬ್ಲಾಕ್ ನಾಗರಭಾವಿಯ ನಿವಾಸಿಗಳು,
4. ಶ್ರೀ. ದತ್ತ ಸರಫ್ ಸ್ಥಳೀಯ ನಿವಾಸಿಗಳು,

ಹಾಗೂ ಹಾಜರಿದ್ದ ವಾರ್ಡ್ ನ ನಿವಾಸಿಗಳು, 10 ಪುರುಷರು.

ಸದರಿ ವಾರ್ಡ್ ಸಮಿತಿ ಸಭೆಯನ್ನು ಹಾಜರಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

**ಕಾಮಗಾರಿ ವಿಭಾಗಕ್ಕೆ** ಸಂಬಂಧಿಸಿದಂತೆ ಹಾಜರಿದ್ದ ನಿವಾಸಿಗಳು ಈ ಕೆಳಕಂಡಂತೆ ದೂರುಗಳನ್ನು ವ್ಯಕ್ತಪಡಿಸಿ ತುರ್ತಾಗಿ ಸರಿಪಡಿಸಲು ಸಭೆಯಲ್ಲಿ ಕೋರಿರುತ್ತಾರೆ.

- ಎನ್.ಜಿ.ಇ.ಎಫ್ ಬಡಾವಣೆ ನಾಗರಭಾವಿಯಲ್ಲಿನ ಚರಂಡಿಗಳಲ್ಲಿ ತುಂಬಿರುವ ಹೂಳನ್ನು ತೆಗೆಯಲು ಕೋರಿರುತ್ತಾರೆ.

- ಎನ್.ಜಿ.ಇ.ಎಫ್ ಬಡಾವಣೆ 14ನೇ ಬ್ಲಾಕ್, 2ನೇ ಅಡ್ಡ ರಸ್ತೆ ಮತ್ತು 13ನೇ ಬ್ಲಾಕ್ ಕುವೆಂಪು ಪಾರ್ಕ್ ಪಕ್ಕದ ರಸ್ತೆಗಳು ಹಾಳಾಗಿದ್ದು, ಸದರಿ ರಸ್ತೆಗಳಿಗೆ ಹೊಸದಾಗಿ ಡಾಂಬರೀಕರಣ ಮಾಡಲು ಕೋರಿರುತ್ತಾರೆ.

**ಕ್ರಮ:** ಸ.ಕಾ.ನಿ.ಅ, ರಾ.ರಾ.ನ, ಕಿರಿಯ ಅಭಿಯಂತರರು ಶ್ರೀ. ವೆಂಕಟೇಶ್ ಮತ್ತು ಸಹಾಯಕ ಅಭಿಯಂತರರು ಶ್ರೀ. ಸಿದ್ದರಾಮಯ್ಯ

**ಘನ ತ್ಯಾಜ್ಯ ವಿಭಾಗಕ್ಕೆ** ಸಂಬಂಧಿಸಿದಂತೆ ಹಾಜರಿದ್ದ ನಿವಾಸಿಗಳು ಈ ಕೆಳಕಂಡಂತೆ ದೂರುಗಳನ್ನು ವ್ಯಕ್ತಪಡಿಸಿ ತುರ್ತಾಗಿ ಸರಿಪಡಿಸಲು ಸಭೆಯಲ್ಲಿ ಕೋರಿರುತ್ತಾರೆ.

- ಎನ್.ಜಿ.ಇ.ಎಫ್ ಬಡಾವಣೆ 14ನೇ ಬ್ಲಾಕ್, 2ನೇ ಅಡ್ಡ ರಸ್ತೆಯಲ್ಲಿ ದಿನ ನಿತ್ಯ ಕಸ ಗುಡಿಸುತ್ತಿರುವುದಿಲ್ಲ, ಇದನ್ನು ಗಮನಕ್ಕೆ ತೆಗೆದುಕೊಂಡು ತುರ್ತಾಗಿ ಸರಿಪಡಿಸಲು ಕೋರಿರುತ್ತಾರೆ.
- ಕಸ ಸಂಗ್ರಹಣೆ ಮಾಡುವ ಆಟೋ ಚಾಲಕರು ಕಸ ಸಂಗ್ರಹಣೆ ಮಾಡಲು ಹಣವನ್ನು ಕೊಡಲು ಒತ್ತಾಯ ಮಾಡುತ್ತಿದ್ದು, ಇದನ್ನು ಶೀಘ್ರವೇ ಸಂಬಂಧಪಟ್ಟ ಅಧಿಕಾರಿಗಳು ಗಮನಕ್ಕೆ ತೆಗೆದುಕೊಂಡು ಹಣವನ್ನು ಒತ್ತಾಯ ಮಾಡುತ್ತಿರುವವರ ಮೇಲೆ ಕ್ರಮವಹಿಸಲು ಕೋರಿರುತ್ತಾರೆ.

**ಕ್ರಮ:** ಸ.ಕಾ.ನಿ.ಅ (ಘ.ತ್ಯಾ.ನಿ), ಹಾಗೂ ಶ್ರೀ. ಶರತ್ ಕಿರಿಯ ಆರೋಗ್ಯ ಪರಿವೀಕ್ಷಕರು

**ಬೆಸ್ಕಾಂ ವಿಭಾಗಕ್ಕೆ** ಸಂಬಂಧಿಸಿದಂತೆ ಹಾಜರಿದ್ದ ನಿವಾಸಿಗಳು ಈ ಕೆಳಕಂಡಂತೆ ದೂರುಗಳನ್ನು ವ್ಯಕ್ತಪಡಿಸಿ ತುರ್ತಾಗಿ ಸರಿಪಡಿಸಲು ಕೋರಿರುತ್ತಾರೆ.

- 14ನೇ ಬ್ಲಾಕ್ ಎನ್.ಜಿ.ಇ.ಎಫ್ ಬಡಾವಣೆ, ನಾಗರಭಾವಿಯಲ್ಲಿ 5 ವಿದ್ಯುತ್ ಕಂಬಗಳನ್ನು ಅಳವಡಿಸಲು ಕೋರಿರುತ್ತಾರೆ.

**ಕ್ರಮ:** ಸಹಾಯಕ ಅಭಿಯಂತರರು ಬೆಸ್ಕಾಂ ವಿಭಾಗ ಶ್ರೀ. ಮೋಹನ್ ಕುಮಾರ್

**ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗಕ್ಕೆ** ಸಂಬಂಧಿಸಿದಂತೆ ಹಾಜರಿದ್ದ ನಿವಾಸಿಗಳು ಈ ಕೆಳಕಂಡಂತೆ ದೂರುಗಳನ್ನು ವ್ಯಕ್ತಪಡಿಸಿ ತುರ್ತಾಗಿ ಸರಿಪಡಿಸಲು ಕೋರಿರುತ್ತಾರೆ

- ಜವರನದೊಡ್ಡಿಯ ಸಿದ್ದಲಿಂಗಯ್ಯ ಪಾರ್ಕ್ ಪಕ್ಕದ ಮುಖ್ಯರಸ್ತೆಯಲ್ಲಿ ಒಳಚರಂಡಿ ನೀರನ್ನು ನೇರವಾಗಿ ಮಳೆ ನೀರಿನ ಕಾಲುವೆಗೆ ಸಂಪರ್ಕ ಕೊಟ್ಟಿರುತ್ತಾರೆ, ಇದನ್ನು ಶೀಘ್ರವೇ ಸಂಬಂಧಪಟ್ಟ ಅಧಿಕಾರಿಗಳು ಗಮನಕ್ಕೆ ತೆಗೆದುಕೊಂಡು ತುರ್ತಾಗಿ ಸರಿಪಡಿಸಲು ಕೋರಿರುತ್ತಾರೆ.

**ಕ್ರಮ:** ಕಾವ್ಯ ಸಹಾಯಕ ಅಭಿಯಂತರರು ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ.

**ಅರಣ್ಯ ಇಲಾಖೆ ವಿಭಾಗಕ್ಕೆ** ಸಂಬಂಧಿಸಿದಂತೆ ಹಾಜರಿದ್ದ ನಿವಾಸಿಗಳು ಈ ಕೆಳಕಂಡಂತೆ ದೂರುಗಳನ್ನು ವ್ಯಕ್ತಪಡಿಸಿ ತುರ್ತಾಗಿ ಸರಿಪಡಿಸಲು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಅಂದಿನ ಸಭೆಗೆ ಗೈರುಹಾಜರಾಗಿರುವುದನ್ನು ಪ್ರಶ್ನಿಸಿ ಮುಂದಿನ ಸಭೆಯಲ್ಲಿ ತಪ್ಪದೆ ಹಾಜರಾಗಲು ಕೋರಿರುತ್ತಾರೆ.

- ವಾರ್ಡ್ ನಲ್ಲಿನ ಬೀದಿದೀಪಗಳ ಬೆಳಕಿಗೆ ಅಡಚಣೆ ಉಂಟುಮಾಡುತ್ತಿರುವ ಮರಗಳ ರೆಂಬೆಗಳನ್ನು, ಬೀಳುವ ಮತ್ತು ಒಣಗಿಹೋಗಿರುವ ಮರಗಳನ್ನು ಗಮನಕ್ಕೆ ತೆಗೆದುಕೊಂಡು ತುರ್ತಾಗಿ ಕತ್ತರಿಸಲು ಕೋರಿರುತ್ತಾರೆ.

**ಕ್ರಮ:** ಶ್ರೀ. ಜಗದೀಶ್ ಅರಣ್ಯ ಇಲಾಖೆ

**ಪಶು ಸಂಗೋಪನಾ ವಿಭಾಗಕ್ಕೆ** ಸಂಬಂಧಿಸಿದಂತೆ ಹಾಜರಿದ್ದ ನಿವಾಸಿಗಳು ಈ ಕೆಳಕಂಡಂತೆ ದೂರುಗಳನ್ನು ವ್ಯಕ್ತಪಡಿಸಿ ತುರ್ತಾಗಿ ಸರಿಪಡಿಸಲು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಅಂದಿನ ಸಭೆಗೆ ಗೈರುಹಾಜರಾಗಿರುವುದನ್ನು ಪ್ರಶ್ನಿಸಿ ಮುಂದಿನ ಸಭೆಯಲ್ಲಿ ತಪ್ಪದೆ ಹಾಜರಾಗಲು ಕೋರಿರುತ್ತಾರೆ.

- ವಾರ್ಡ್ ನಲ್ಲಿ ಹೆಚ್ಚಾಗಿರುವ ಬೀದಿ ನಾಯಿಗಳ ಹಾವಳಿಯನ್ನು ಗಮನಕ್ಕೆ ತೆಗೆದುಕೊಂಡು ತುರ್ತಾಗಿ ಕ್ರಮ ಕೈಗೊಳ್ಳಲು ಹಾಜರಿದ್ದ ನಿವಾಸಿಗಳು ಕೋರಿರುತ್ತಾರೆ.

**ಕ್ರಮ:** ಶ್ರೀ. ಶ್ರೀನಿವಾಸ್ ಪಶು ಸಂಗೋಪನಾ ಇಲಾಖೆ

**ಯೋಜನೆ ವಿಭಾಗಕ್ಕೆ** ಸಂಬಂಧಿಸಿದಂತೆ ಹಾಜರಿದ್ದ ನಿವಾಸಿಗಳು ಈ ಕೆಳಕಂಡಂತೆ ದೂರುಗಳನ್ನು ವ್ಯಕ್ತಪಡಿಸಿ ತುರ್ತಾಗಿ ಸರಿಪಡಿಸಲು ಕೋರಿರುತ್ತಾರೆ

- 12 ನೇ ಅಡ್ಡರಸ್ತೆ, ಎನ್.ಜಿ.ಇ.ಎಫ್ ಬಡಾವಣೆಯಲ್ಲಿನ ನವರತ್ನ ಶಕ್ತಿ ಕೇಂದ್ರ ಆಟದ ಮೈದಾನದಲ್ಲಿ ನೆಲ ಕುಸಿದಿರುತ್ತದೆ, ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಗಮನಕ್ಕೆ ತೆಗೆದುಕೊಂಡು ತುರ್ತಾಗಿ ಸರಿಪಡಿಸಲು ಕೋರಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಸೂಚಿಸಿರುವ ಸಂಬಂಧ ಪಟ್ಟ ಅಧಿಕಾರಿಗಳು ಅಗತ್ಯ ಕ್ರಮವಹಿಸಿ ಹಾಗೂ ಕೈಗೊಂಡ ಕ್ರಮದ ಬಗ್ಗೆ ಸಂಬಂಧಪಟ್ಟವರಿಗೆ ದೂರವಾಣಿ ಮುಖಾಂತರ ಮುಂದಿನ ಸಭೆಯಲ್ಲಿ ತಿಳಿಸಬೇಕೆಂದು ಕೋರುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

| | |
|---|---|
| ಸಹಿ/- | ಸಹಿ/- |
| ಕಾರ್ಯದರ್ಶಿಗಳು ವಾರ್ಡ್ ಸಮಿತಿ | ನೋಡಲ್‌ಅಧಿಕಾರಿಗಳು |
| ವಾರ್ಡ್ ಸಂಖ್ಯೆ - 48 | ವಾರ್ಡ್ ಸಂಖ್ಯೆ - 4 |

**ಪ್ರತಿಯನ್ನು:-**

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲುಕೋರಿದೆ.
2. ಜಂಟಿಆಯುಕ್ತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ,
3. ಮುಖ್ಯ ಅಭಿಯಂತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ,
4. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗರವರ ಮಾಹಿತಿಗಾಗಿ,
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ,
6. ವಾರ್ಡ್ ಸಮಿತಿ ಸದಸ್ಯರುಗಳಿಗೆ,